ಅವಧಿ	ಒಟ್ಟಾರೆ ರದ್ದತಿ ವಾಹನಗಳು	ಒಟ್ಟಾರೆ ಹೊಸ ವಾಹನಗಳನ್ನು ಬದಲಾವಣೆಗಾಗಿ ನೀಡಿದ್ದು.
ಏಪ್ರಿಲ್ 94 ರಿಂದ ಮಾರ್ಚ್ 95	12	14
ಏಪ್ರಿಲ್ 95 ರಿಂದ ಆಗಸ್ಟ್ 95	02	05

ಇ) ಯಾದಗಿರಿ ನಾಲತವಾಡ ಮಾರ್ಗದಲ್ಲಿ ಆಚರಣೆಯಾಗುತ್ತಿದ್ದ ಅನುಸೂಚಿ ಸಂಖ್ಯೆ 61ನ್ನು ಜನಪ್ರಿಯಗೊಳ್ಳದಿರುವ ಕಾರಣ ರದ್ದು ಪಡಿಸಲಾಗಿದೆ.

ಅನುಸೂಚಿಗಳ ಸಂಖ್ಯೆ 30 ಮತ್ತು 31ನ್ನು ಯಾದಗಿರಿ-ಶೋರಾಪುರ್ ಮತ್ತು ಯಾದಗಿರಿ ತಾಳಿಕೋಟೆ ಮಾರ್ಗಗಳ ಮೇಲೆ ಆಚರಣೆ ಮಾಡಲಾಗುತ್ತಿದೆ. ಅವುಗಳನ್ನು ರದ್ದುಪಡಿಸಿರುವುದಿಲ್ಲ.

ಪುತ್ತೂರು ತಾಲ್ಲೂಕಿನ ಸಕ್ರಮೀಕರಣ ಅರ್ಜಿಗಳು

2020 - ಶ್ರೀ ಡಿ.ವಿ. ಸದಾನಂದ : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪುತ್ತೂರು ತಾಲ್ಲೂಕಿನಲ್ಲಿ ಬಂದ ಒಟ್ಟು ಭೂ ಸಕ್ರಮೀಕರಣ ಅರ್ಜಿಗಳೆಷ್ಟು; ಇದರಲ್ಲಿ ಕಾನೂನಿನ ಚೌಕಟ್ಟಿನಲ್ಲಿ ಮಂಜೂರು ಮಾಡಬಲ್ಲ ಅರ್ಜಿಗಳ ಸಂಖ್ಯೆ ಎಷ್ಟು, ಮತ್ತು ವಿಸ್ತೀರ್ಣವೆಷ್ಟು;

ಆ) ಕಾನ್ ಮತ್ತು ಕುಮ್ಕಿ ಜಮೀನುಗಳ ಸಕ್ರಮೀಕರಣ ಅರ್ಜಿಗಳನ್ನು ಕಾನೂನು ವ್ಯಾಪ್ತಿಗೆ ತರುವಲ್ಲಿ ಭೂಕಂದಾಯ ಅಧಿನಿಯಮಕ್ಕೆ ತಿದ್ದುಪಡಿ ತರುವ ವಿಷಯ ಸರ್ಕಾರಕ್ಕಿದೆಯೇ, ಇಲ್ಲದಿದ್ದಲ್ಲಿ ಕಾರಣಗಳೇನು?

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) :

ಅ) 28,410 ಅರ್ಜಿಗಳು, 54,990-89 ಏಕರೆ ವಿಸ್ತೀರ್ಣ

	ಅರ್ಜಿಗಳ ಸಂಖ್ಯೆ	ವಿಸ್ತೀರ್ಣ ಏಕರೆಗಳಲ್ಲಿ
ಈವರೆಗೆ ಮಂಜೂರಾದವು	14191	22047-36
ಈವರೆಗೆ ತಿರಸ್ಕೃತವಾದವು	4145	8523-66
ಬಾಕಿ ಇರುವುದು	10074	24419-87

ಬಾಕಿ ಇರುವ ಅರ್ಜಿಗಳ ಪೈಕಿ ಕಾನೂನಿನ ಚೌಕಟ್ಟಿನಲ್ಲಿ ಮಂಜೂರು ಮಾಡಬಲ್ಲ ಅರ್ಜಿಗಳ ಸಂಖ್ಯೆ ಎಷ್ಟು ಎಂಬುದು ಸಮಿತಿಯಿಂದ ಸದರಿ ಅರ್ಜಿಗಳ ಪರಿಶೀಲನೆಯಾಗಿ ನಿರ್ಧಾರವಾದ ನಂತರ ಮಾತ್ರ ತಿಳಿದು ಬರುತ್ತದೆ.

ಅ) ಕಾನ್ ಮತ್ತು ಕುಮ್ಕಿ ಜಮೀನುಗಳಲ್ಲಿ ಆಗಿರುವ ಒತ್ತುವರಿಯ ಸಕ್ರಮೀಕರಣ ವಿಷಯ ಸರಕಾರದ ಪರಿಶೀಲನೆಯಲ್ಲಿದೆ.

ಈಚಲುವನ ಮತ್ತು ಅಮೃತಮಹಲ್ ಕಾವಲು ಭೂಮಿಯ ಅನಧಿಕೃತ ಸಾಗುವಳಿ

2022 - ಶ್ರೀ ಬಿ. ಶಿವರಾಮು (ಗಂಡಸೀ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಈಚಲುವನ ಮತ್ತು ಅಮೃತ ಮಹಲ್ ಕಾವಲು ಭೂಮಿಗಳನ್ನು ಅನಧಿಕೃತವಾಗಿ ಸಾಗುವಳಿ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಹಾಗಿದ್ದಲ್ಲಿ ಒಟ್ಟು ಏಕರೆ ಎಷ್ಟು; ಪಾರಂ ನಂ. 50ರಲ್ಲಿ ಆರ್ಜಿ ಬಂದಿರುವ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ಒದಗಿಸುವುದು)

ಆ) ಅನಧಿಕೃತ ಸಾಗುವಳಿ ಈಚಲುವನ ಮತ್ತು ಅಮೃತಮಹಲ್ ಕಾವಲು ಭೂಮಿಯನ್ನು ಸಕ್ರಮ ಮಾಡಲು ಕಾನೂನಿನಡಿಯಲ್ಲಿ ಅವಕಾಶವಿದೆಯೇ; ಇದ್ದಲ್ಲಿ ಅನುಸರಿಸಲು ಇರುವ ಮಾರ್ಗ ಯಾವುವು;

ಇ) ಕಾನೂನಿನಲ್ಲಿ ಅವಕಾಶವಿಲ್ಲದಿದ್ದಲ್ಲಿ ಅವಕಾಶ ಮಾಡುವ ಯೋಜನೆ ಸರ್ಕಾರಕ್ಕೆ ಇದೆಯೇ, ಇದ್ದಲ್ಲಿ ಯಾವಾಗ?

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) :

ಅ) ಹೌದು, ಈಚಲುವನ ಮತ್ತು ಅಮೃತಮಹಲ್ ಕಾವಲು ಹಾಗೂ ಇತರೆ ವರ್ಗದ ಸರ್ಕಾರದ ಜಮೀನು ಸೇರಿ ಒಟ್ಟು 25,80,214 ಏಕರೆಗಳು ಒತ್ತುವರಿಯಾಗಿರುತ್ತದೆ. ಫಾರಂ ನಂ.೫೦ ರಲ್ಲಿ ಒಟ್ಟು 10,86,826 ಅರ್ಜಿಗಳು ಸ್ವೀಕೃತಿಯಾಗಿರುತ್ತವೆ. (ಈಚಲುವನ ಮತ್ತು ಅಮೃತ ಮಹಲ್ ಕಾವಲ್ ಬಗ್ಗೆ ಪ್ರತ್ಯೇಕ ಮಾಹಿತಿ ಲಭ್ಯವಿಲ್ಲ.- ಜಿಲ್ಲಾವಾರು ಮಾಹಿತಿ ಅನುಬಂಧದಲ್ಲಿ ಒದಗಿಸಿದೆ).

ಆ) ಇಲ್ಲ. ಉದ್ಭವಿಸುವುದಿಲ್ಲ.

ಇ) ಈಚಲುವನದಲ್ಲಿ ಆಗಿರುವ ಒತ್ತುವರಿಯ ಸಕ್ರಮೀಕರಣದ ವಿಚಾರವು ಪರಿಶೀಲನೆಯಲ್ಲಿದೆ.